ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Special Issue-3, March - April 2026, Pp. 44-49
©*IIMRD*, Mysuru
IIMRD JOURNALS
www.iimrd.com

# ಪರಿಸರ ಸಂರಕ್ಷಣೆಯಲ್ಲಿ ಸರ್ಕಾರೇತರ ಸಂಸ್ಥೆಗಳ ಪಾತ್ರ : ವಿಶೇಷವಾಗಿ ಆದಮ್ಯ ಚೇತನ

**ನಂದೀಶ್ ಆರ್.ಎನ್[1] ಮತ್ತು ಡಾ.ಎಸ್.ನಾಗರತ್ನಮ್ಮ[2]**
[1]ಸಂಶೋಧನಾ ವಿದ್ಯಾರ್ಥಿ, [2]ಹಿರಿಯ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**ಸಾರಾಂಶ: (Abstract)**

*ಮಾನವ ಸಮಾಜದಲ್ಲಿ ಸರ್ಕಾರೇತರ ಸಂಸ್ಥೆಗಳ ಪ್ರಾಮುಖ್ಯತೆ ಮಹತ್ವವಾದದ್ದು, ಅಸಹಾಯಕ ಕುಂಠಿತ ಅಭಿವೃದ್ಧಿ, ಪರಿಸರದ ಅಸಮತೋಲನವನ್ನು ಸರಿಪಡಿಸಲು, ಸಮಸಮಾಜದ ನಿರ್ಮಾಣ ಮಾಡಲು, ಪರಿಸರವನ್ನು ಸಮತೋಲನ ಸ್ಥಿತಿಗೆ ತರಲು ಶ್ರಮಿಸುತ್ತಿರುವುದರಲ್ಲಿ ಸರ್ಕಾರೇತರ ಸಂಸ್ಥೆಗಳು ಸಹ ಒಂದಾಗಿವೆ. ಸರ್ಕಾರೇತರ ಸಂಸ್ಥೆಗಳು, ಧಾರ್ಮಿಕ ಸಂಸ್ಥೆಗಳ ಒಂದು ಭಾಗವಾಗಿದ್ದು, 20ನೇ ಶತಮಾನದ ಕಾಲಘಟ್ಟದ ಆರಂಭದಲ್ಲಿ ಸಾಮಾಜಿಕ ಕಲ್ಯಾಣಕ್ಕೆ ಕಾರಣವಾಯಿತು. ಪರಿಹಾರ ಮತ್ತು ಪುನರ್ವಸತಿ ಸೌಲಭ್ಯಗಳೊಂದಿಗೆ ಈ ಸಂಸ್ಥೆಗಳು ಶಿಕ್ಷಣ, ಆರೋಗ್ಯ, ಪರಿಸರ ಸಂರಕ್ಷಣಾ ಕಲ್ಯಾಣ ಕಾರ್ಯಕ್ರಮಗಳಲ್ಲಿ ಸಕ್ರಿಯಗೊಂಡವು. ಪರಿಸರ ಸಂರಕ್ಷಣೆಯಲ್ಲಿ ಸರ್ಕಾರೇತರ ಸಂಸ್ಥೆಗಳು ಜನಜಾಗೃತಿ, ಸಸಿಗಳ ಬೆಳವಣಿಗೆ, ತ್ಯಾಜ್ಯ ವಿಂಗಡಣೆ ಹಾಗೂ ಪರಿಸರ ಸುಸ್ಥಿರ ಅಭಿವೃದ್ಧಿಯ ಕಡೆಗೆ ಹೆಚ್ಚು ಗಮನ ಹರಿಸುತ್ತಿವೆ. ಪ್ರಸ್ತುತ ಲೇಖನದಲ್ಲಿ ಪರಿಸರ ಸಂರಕ್ಷಣೆ ಹಾಗೂ ನಗರೀಕರಣದ ಅವಧಿಯಲ್ಲಿ ಹಸಿರು ನಗರವನ್ನು ನಿರ್ಮಿಸುವ ಸಂಸ್ಥೆಯಾದ ಆದಮ್ಯ ಚೇತನ ಕುರಿತು ಅಧ್ಯಯನ ಮಾಡಲಾಗಿದೆ.*

**ಮುಖ್ಯಪದಗಳು (Keywords):** *ಸರ್ಕಾರೇತರ ಸಂಸ್ಥೆ, ಪರಿಸರ ಸಂರಕ್ಷಣೆ, ನಗರೀಕರಣ, ಆದಮ್ಯ ಚೇತನ*

## ಪೀಠಿಕೆ

'ಆದಮ್ಯ ಚೇತನ' ಎಂಬ ಸರ್ಕಾರೇತರ ಸಂಸ್ಥೆಯು ಸಾಮಾಜ ಅಭಿವೃದ್ಧಿ, ಪರಿಸರ ಸಂರಕ್ಷಣೆ ವಿವಿಧ ಕ್ಷೇತ್ರಗಳು ಒಳಗೊಂಡ ಸಾಮೂಹಿಕ ಕೆಲಸ ಕಾರ್ಯಗಳಲ್ಲಿ ಸಕ್ರಿಯವಾಗಿರುವಂತ ಒಂದು ಸಂಸ್ಥೆಯಾಗಿದೆ. ಈ ಸಂಸ್ಥೆಯು ಪರಿಸರ ಕುರಿತು ಅರಿವು, ಪರಿಸರ ಸಂರಕ್ಷಣೆ ಹಾಗೂ ನಗರೀಕರಣ ಹಾಗೂ ಸುಸ್ಥಿರ ತ್ಯಾಜ್ಯ ವಿಂಗಡಣೆಯ ಕಾರ್ಯ ಚಟುವಟಿಕೆಯನ್ನು ನಿರ್ವಹಿಸುತ್ತದೆ.

ಹಿಂದೆ ಸರ್ಕಾರೇತರ ಸಂಸ್ಥೆಗಳು ಕಾನೂನು ರೂಪ ಪಡೆದಿರಲಿಲ್ಲ ಹಾಗೂ ಕಾನೂನು ಚೌಕಟ್ಟಿನೊಳಗೆ ಕಾರ್ಯನಿರ್ವಹಿಸುವ ಸ್ಥಿತಿ ಇರಲಿಲ್ಲ ವರ್ಷಗಳು ಕಳೆದಂತೆ ಸಿರಿವಂತ ಉನ್ನತ ವರ್ಗದವರು ಮತ್ತು ಸಮಾಜಮುಖಿ, ಪರಿಸರಕಾಳಜಿ ಇರುವ ಚಿಂತಕರು ತಮ್ಮಲ್ಲಿ ಲಭ್ಯವಿರುವ ಸಂಪನ್ಮೂಲಗಳು ಹಾಗೂ ಚಿಂತನೆಗಳನ್ನು ಜನಸಾಮಾನ್ಯರಿಗೆ

*Please cite this article as:* ನಂದೀಶ್ ಆರ್.ಎನ್ ಮತ್ತು ಎಸ್.ನಾಗರತ್ನಮ್ಮ. (2026). ಪರಿಸರ ಸಂರಕ್ಷಣೆಯಲ್ಲಿ ಸರ್ಕಾರೇತರ ಸಂಸ್ಥೆಗಳ ಪಾತ್ರ : ವಿಶೇಷವಾಗಿ ಆದಮ್ಯ ಚೇತನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(3). ಪು.ಸಂ.* 44–49

ತಲುಪಿಸುವ ಹಾಗೂ ತಿಳಿಸುವ ಪ್ರಯತ್ನಗಳು ಮಾಡುತ್ತಿದ್ದರು. ನಿರಂತರವಾಗಿ ಬರಬರುತ್ತಾ ಸರ್ಕಾರೇತರ ಸಂಸ್ಥೆಗಳು (ಎನ್.ಜಿ.ಓ.) ಸಂಸ್ಥೆಗಳು ಒಂದು ನಿರ್ದಿಷ್ಟವಾದ ರೂಪವನ್ನು ಪಡೆದುಕೊಂಡವು, ಸರ್ಕಾರೇತರ ಸಂಸ್ಥೆಗಳ ಉಗಮ ಮತ್ತು ಬೆಳವಣಿಗೆಯಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿನ ಸರ್ಕಾರೇತರ ಸಂಸ್ಥೆಗಳು, ಸ್ವಾತಂತ್ರ್ಯ ನಂತರದ ಕಾಲಘಟ್ಟದಲ್ಲಿನ ಸರ್ಕಾರೇತರ ಸಂಸ್ಥೆಗಳು ಎಂದು ಎರಡು ರೀತಿಯಲ್ಲಿ ವಿಂಗಡನೆ ಮಾಡಬಹುದಾಗಿದೆ.

ಸ್ವಾತಂತ್ರ್ಯ ಪೂರ್ವದಲ್ಲಿ ಸರ್ಕಾರೇತರ ಸಂಸ್ಥೆಗಳು ಅಥವಾ ಸ್ವಯಂ ಸೇವಾ ಸಂಸ್ಥೆಗಳು ಕುರಿತಂತೆ ಅರ್ಥಶಾಸ್ತ್ರದಲ್ಲಿ ನಿರ್ಗತಿಕ ಮನುಷ್ಯರಿಗೆ ಸೌಲಭ್ಯಗಳನ್ನು ಕಲ್ಪಿಸುವ ಕುರಿತಂತೆ ಅಸ್ತಿತ್ವದ ಬಗ್ಗೆ ಉಲ್ಲೇಖವಿದೆ. ಹಿಂದೂ ಧರ್ಮವು ದೊಡ್ಡ ಪ್ರಮಾಣದಲ್ಲಿ ಸಾಮಾಜಿಕ ಕಾರ್ಯ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವ ಕೇಂದ್ರವಾಗಿದೆ. ಹಿಂದೆ ಪರೋಪಕಾರಿ ಕೆಲಸ ಕಾರ್ಯಗಳು, ಮಾನವೀಯ ಮೌಲ್ಯಗಳು, ದಾರ್ಮಿಕ ಕಾರ್ಯಗಳ ಭಾಗವಾಗಿ ಒಳಗೊಂಡಿತ್ತು. ಬಹಳಷ್ಟು ಕ್ರಿಶ್ಚಿಯನ್ ಮಿಷನರಿಗಳು, ಸೇವಾ ಸಂಸ್ಥೆಗಳು, ಸಮಾಜಮುಖಿ ಮಾನವ ಸುಧಾರಣಾ ಕಲ್ಯಾಣ ಕಾರ್ಯಗಳಾದ ಬಡವರಿಗೆ, ನಿರ್ಗತಿಕರಿಗಾಗಿ ಆಶ್ರಮಗಳು, ಆಸ್ಪತ್ರೆಗಳು, ಶಿಕ್ಷಣ ಸಂಸ್ಥೆಗಳು ಆರಂಭಿಸಿ ಮಾನವ ಕಲ್ಯಾಣವನ್ನು ಮಾಡುತ್ತಿದ್ದರು.

ಪ್ರಾಚೀನ ಮತ್ತು ಮಧ್ಯಕಾಲೀನ ಕಾಲಘಟ್ಟದಲ್ಲಿ ಶಿಕ್ಷಣ, ಆರೋಗ್ಯ, ಸಾಂಸ್ಕೃತಿಕ ಪ್ರಚಾರ, ಕ್ಷಾಮಗಳು, ನದಿ ಪ್ರವಾಹಗಳು, ಸಾಂಕ್ರಾಮಿಕ ರೋಗ ರುಜಿನಗಳು, ಪರಿಸರ, ಹೀಗೆ ಹಲವು ಕ್ಷೇತ್ರಗಳಲ್ಲಿ ಸರ್ಕಾರೇತರ ಸಂಸ್ಥೆಗಳು ತಮ್ಮ ಸಮಾಜಮುಖಿ ಸೇವೆಗಳನ್ನು ಸಲ್ಲಿಸುತ್ತಿದ್ದರು. ಆದರೂ ಮಾನವೀಯ ಮೌಲ್ಯಗಳು ಅಷ್ಟೊಂದು ಪ್ರಸಿದ್ಧಿ ಪಡೆದಿರಲಿಲ್ಲ ಅಂದಿನ ಕಾಲಘಟ್ಟದಲ್ಲಿ ಸಮಸಮಾಜದ ಅಭಿವೃದ್ಧಿಯಲ್ಲಿ ಹೆಚ್ಚು ಪ್ರತಿಕೂಲತೆಯನ್ನು ಸಹ ಪಡೆದಿರಲಿಲ್ಲ. 19ನೇ ಶತಮಾನದ ಪ್ರಾರಂಭದಲ್ಲಿ ದೊಡ್ಡಮಟ್ಟದ ಸರ್ಕಾರೇತರ ಕೆಲಸ ಕಾರ್ಯಗಳು ಕಂಡುಬಂದವು ಹಾಗೂ ಮಾನವೀಯ ಮೌಲ್ಯಗಳ ನೆಲೆಯನ್ನು ಪ್ರೋತ್ಸಾಹಿಸಲಾಗಿದ್ದವು.

ಸ್ವಾತಂತ್ರ್ಯ ಪೂರ್ವ ಭಾರತದಲ್ಲಿ ಪ್ರಗತಿಪರ ಚಿಂತಕರು, ಸ್ವಾತಂತ್ರ್ಯ ಚಳವಳಿಯ ಹೋರಾಟಗಾರರು, ಸಮಾಜದ ಅಭಿವೃದ್ಧಿಗೆ ಶ್ರಮಿಸುವ ಸಮಾಜ ಸುಧಾರಕರು, ಸಮಾಜದಲ್ಲಿ ನೆಲೆಯೂರಿ ಆಚರಣೆಯಲ್ಲಿದ್ದ ಅನಿಷ್ಟ ಪದ್ಧತಿಗಳ ವಿರುದ್ಧವಾಗಿ ಹೋರಾಟ ಮಾಡಲು ಮುಂದಾದರು. ರಾಜಾರಾಮ್ ಮೋಹನ್ ರಾಯ್, ಸ್ವಾಮಿ ವಿವೇಕಾನಂದರು, ಮಹಾತ್ಮ ಜ್ಯೋತಿಬಾಪುಲೆ, ಮಹರ್ಷಿ ಕರ್ವೆ, ಈಶ್ವರ ಚಂದ್ರ ವಿದ್ಯಾಸಾಗರರು ಹೀಗೆ ಅನೇಕ ಮಹಾನ್ ಚಿಂತನಾ ಮಹನೀಯರು ಸರ್ಕಾರೇತರ ಸಂಸ್ಥೆಗಳನ್ನು ಕಟ್ಟುವ ಮುಖೇನ ಭಾರತದಲ್ಲಿನ ಸಮಾಜದ ಬದಲಾವಣೆಯನ್ನು ತಂದಂತವರಲ್ಲಿ ಪ್ರಮುಖರಾದವರು.[1]

1828ರಲ್ಲಿ ರಾಜಾರಾಮ್ ಮೋಹನ್ ರಾಯರು ಬ್ರಹ್ಮ ಸಮಾಜವನ್ನು ಸ್ಥಾಪಿಸಿ, ಅಸಂಬದ್ಧ ಸಂಪ್ರದಾಯಿಕ ಆಚರಣೆಗಳು ಹಾಗೂ ಸಮಾಜದ ಕೆಟ್ಟ ಅನಿಷ್ಟ ಪದ್ಧತಿಗಳ ವಿರುದ್ಧವಾಗಿ ಹೋರಾಟ ಮಾಡಿದರು. ಈ ಹೋರಾಟದ ಫಲವಾಗಿ ಸತಿಪದ್ಧತಿ ಆಚರಣೆ ನಿಷೇಧಿಸಲಾಯಿತು. ಈಶ್ವರ್ ಚಂದ್ರ ವಿದ್ಯಾಸಾಗರರು ವಿಧವಾ ಪುನರ್ ವಿವಾಹವನ್ನು ಪ್ರೋತ್ಸಾಹಿಸಿದರು. ವಿಧವಾಪುನರ್ ವಿವಾಹ ಕಾಯಿದೆ ಜಾರಿಯಾಗುವಲ್ಲಿ ಮಹತ್ವ ಪಾತ್ರವಹಿಸಿದರು. ಹೆಣ್ಣು ಮಕ್ಕಳಿಗೆ ಶಾಲೆಗಳನ್ನು ತೆರೆದು ಶಿಕ್ಷಣ ನೀಡಿದರು. ಸ್ವಾಮಿ ದಯಾನಂದ ಸರಸ್ವತಿಯವರು 1875ರಲ್ಲಿ ಬಾಂಬೆಯಲ್ಲಿ ಆರ್ಯಸಮಾಜವನ್ನು ಸ್ಥಾಪಿಸಿದರು. ಈ ಮುಖಾಂತರ ವಿಗ್ರಹಾರಾಧನೆ, ಸಮಾಜದಲ್ಲಿ ಅಸಮಾನತೆ, ತಾರತಮ್ಯದ

---

[1] ನಾಗರಾಜು, ಆರ್.ಕೆ. (2019), ಪರಿಸರ ಸಂರಕ್ಷಣೆಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಪಾತ್ರ : ಬೆಂಗಳೂರು ನಗರ ಜಿಲ್ಲೆಗೆ ಸಂಬಂಧಿಸಿದಂತೆ ಒಂದು ಸಮಾಜಶಾಸ್ತ್ರೀಯ ಅಧ್ಯಯನ. ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ, ಪು.89

ವಿರುದ್ಧವಾಗಿ ಹೋರಾಟ ಮಾಡಿದರು. ಮಹಾತ್ಮ ಜ್ಯೋತಿಬಾಪುಲೆ ರವರು ಅಸ್ಪೃಶ್ಯತೆ ನಿರ್ಮೂಲನೆ, ಸಮಾಜದ ಅನಿಷ್ಟ ಆಚರಣೆಗಳು ವಿರುದ್ಧವಾಗಿ ಹೋರಾಟ ಮಾಡಿದರು. 1873 ರಲ್ಲಿ ಸತ್ಯಶೋಧಕ ಸಮಾಜವನ್ನು ಸ್ಥಾಪಿಸಿದರು.

ಸಾವಿತ್ರಿಬಾಪುಲೆ ಅವರು ತಮ್ಮ ಪತಿಯನ್ನು ಅನುಸರಿಸಿದ್ದರು ಹೆಣ್ಣು ಮಕ್ಕಳಿಗೆ ಶಿಕ್ಷಣ ಸಿಗುವ ಹಾಗೆ ಮಾಡಬೇಕೆಂದು ಶಾಲೆಯನ್ನು ಆರಂಭ ಮಾಡಿದರು. ಮಹರ್ಷಿ ಕರ್ವೆ ಅವರು ವಿಧವೆಯರಿಗೆ ವಸತಿಗಳ ನಿರ್ಮಾಣ ಮಾಡಿದರು, ಅನೇಕ ಪ್ರಾಥಮಿಕ ಶಾಲೆಗಳನ್ನು ಆರಂಭಿಸಿದರು, ಶಿಕ್ಷಣಕ್ಕೆ ಉತ್ತೇಜನ ನೀಡಿದರು, ಸ್ವಾಮಿ ವಿವೇಕಾನಂದರು ಸೇವೆಯ ಆದರ್ಶಗಳನ್ನು ಪ್ರಚಾರ ಮಾಡುವ ಮೂಲಕ ಆಧುನಿಕ ಭಾರತದ ನಿರ್ಮಾಣಕ್ಕೆ ಕೊಡುಗೆ ನೀಡಿದರು.

ಸರ್ಕಾರೇತರ ಸಂಸ್ಥೆಗಳು, ಧಾರ್ಮಿಕ ಸಂಸ್ಥೆಗಳ ಒಂದು ಭಾಗವಾಗಿದ್ದು, 20ನೇ ಶತಮಾನದ ಕಾಲಘಟ್ಟದ ಆರಂಭದಲ್ಲಿ ಸಾಮಾಜಿಕ ಕಲ್ಯಾಣಕ್ಕೆ ಕಾರಣವಾಯಿತು. ಪರಿಹಾರ ಮತ್ತು ಪುನರ್ವಸತಿ ಸೌಲಭ್ಯಗಳೊಂದಿಗೆ ಈ ಸಂಸ್ಥೆಗಳು ಶಿಕ್ಷಣ, ಆರೋಗ್ಯ, ಪರಿಸರ ಸಂರಕ್ಷಣಾ ಕಲ್ಯಾಣ ಕಾರ್ಯಕ್ರಮಗಳಲ್ಲಿ ಸಕ್ರಿಯಗೊಂಡವು. ಸಮಾಜ ಸುಧಾರಕರ ಉಗಮ ಭಾರತದಲ್ಲಿ ಜಾತ್ಯಾತೀತ ಸ್ವಯಂಪ್ರೇರಿತ ಪ್ರಕ್ರಿಯೆಗೆ ಅಡಿಗಲ್ಲುಹಾಕಿತು. ಮಹಾತ್ಮ ಗಾಂಧೀಜಿಯವರು ಪ್ರೋತ್ಸಾಹಿಸುವ ಗ್ರಾಮ ಸ್ವಯಂಪೂರ್ಣತೆ, ಸ್ವಯಂಪ್ರೇರಿತ ಪಾಲುಗೊಳ್ಳುವಿಕೆ, ಸಂಘ ಸಂಸ್ಥೆಗಳಿಂದ ಸಮಾಜದಲ್ಲಿ ವಂಚಿತ ಸಮುದಾಯಗಳ ಜನರ ಸೌಲಭ್ಯಗಳಿಗಾಗಿ ನ್ಯಾಯವನ್ನು ಪಡೆದುಕೊಳ್ಳಲು ಮಹಾತ್ಮ ಗಾಂಧೀಜಿಯವರು ಸಹ ರಚನಾತ್ಮಕ ಕಾರ್ಯ ಚಟುವಟಿಕೆಗಳನ್ನು ಆರಂಭಿಸಿದರು.

1932ರಲ್ಲಿ ಹರಿಜನ ಸೇವಕ ಸಂಘವನ್ನು ಪ್ರಾರಂಭಿಸಿದರು. ಮಹಾತ್ಮ ಗಾಂಧೀಜಿ, ಪಂಡಿತ್ ಜವಾಹರಲಾಲ್ ನೆಹರು, ಶ್ರೀಮತಿ ಸರೋಜಿನಿ ನಾಯ್ಡು, ಅನಿಬೆಸೆಂಟ್ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ಮುಂತಾದ ಮಹಾನ್ ನಾಯಕರು ತಳ ಸಮುದಾಯದ ಶೋಷಿತ ಜನರ, ಮಹಿಳೆಯರ, ಮಕ್ಕಳ, ಅಲ್ಪ ಸಂಖ್ಯಾತರ, ಕಾರ್ಮಿಕರ, ಬಡವರ, ದೀನದಲಿತರ ಏಳಿಗೆಗಾಗಿ ಸರ್ಕಾರೇತರ ಸಂಸ್ಥೆಗಳ ಮೂಲಕ ಶ್ರಮಿಸಿದ್ದಾರೆ. ಮಹಾತ್ಮ ಗಾಂಧೀಜಿಯವರು ಗ್ರಾಮ ಸ್ವರಾಜ್ಯಕ್ಕಾಗಿ ಹೋರಾಟ ಮಾಡಿದ್ದನ್ನು ನಾವುಗಳು ಇತಿಹಾಸದಲ್ಲಿ ಅಧ್ಯಯನ ಮಾಡಬಹುದು. ಗ್ರಾಮೀಣ ಭಾಗದ ಸಮಾಜದ ಏಳಿಗೆಗಾಗಿ ಮಾಡಿದಂತಹ ಕಾರ್ಯಗಳು ನೂರಾರು ಗ್ರಾಮೀಣ ಪ್ರದೇಶಗಳಲ್ಲಿ ಶಿಕ್ಷಣ, ಆರೋಗ್ಯ, ವಿವಿಧ ಸೌಕರ್ಯಗಳು ಸುಧಾರಣೆಯಾದವು ಗುಡಿ ಕೈಗಾರಿಕೆ, ಸ್ವದೇಶಿ ವಸ್ತುಗಳ ಉತ್ಪಾದನೆ, ಗ್ರಾಮೀಣ ಆರ್ಥಿಕತೆಗೆ ಪ್ರೋತ್ಸಾಹ ಕೊಡಲಾಗಿತ್ತು. ಇದಲ್ಲದೆ ಮಹಿಳೆಯರ ಏಳಿಗೆಗಾಗಿ ಕಾಳಜಿವಹಿಸಲಾಗಿತ್ತು. ಇಂತಹ ಮಹನೀಯರುಗಳು ಸಂಘಟಿಸಿ ಪ್ರಾರಂಬಿಸಿದ್ದ ಸಂಸ್ಥೆಗಳು ಕೆಲವೊಂದಷ್ಟು ನಶಿಸಿವೆ, ಆದರೆ ಇಂದು ಆ ಸಂಘ ಸಂಸ್ಥೆಗಳು, ನಾಯಕರಗಳು, ಆದರ್ಶ, ತತ್ವ ಸಿದ್ಧಾಂತ, ಮಾರ್ಗದರ್ಶನಗಳು, ಬಹಳಷ್ಟು ಸರ್ಕಾರೇತರ ಸಂಸ್ಥೆಗಳಹುಟ್ಟಿಗೆ ಕಾರಣವಾಗಿವೆ. ನಮ್ಮ ದೇಶದಲ್ಲಿ ಸಮಾಜ ಮತ್ತು ಪರಿಸರ ಕ್ಷೇತ್ರಕ್ಕೆ ತಮ್ಮದೇ ಆದಂತಹ ಕೊಡುಗೆಗಳನ್ನು ನೀಡಿವೆ.

ಸ್ವಾತಂತ್ರ್ಯ ನಂತರದ ಕಾಲಘಟ್ಟದಲ್ಲಿನ ಸರ್ಕಾರೇತರ ಸಂಸ್ಥೆಗಳ ಸ್ಥಾನಮಾನಗಳು ಬದಲಾಗಿ ಗ್ರಾಮಾಂತರ ಭಾಗದ ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆ ಮೂಲ ಮಂತ್ರವಾಗಿಸಿಕೊಂಡು, ಆರ್ಥಿಕ ಅಭಿವೃದ್ಧಿಯ ಕಡೆ ಸರ್ಕಾರೇತರ ಸಂಸ್ಥೆಗಳ ನಿರ್ಧಾರ ನಿಲುವುಗಳು ಪರಿವರ್ತನೆಯಾದವು. 1950–60ರ ಕಾಲಘಟ್ಟದಲ್ಲಿ ರಾಜ್ಯ ಸರ್ಕಾರಗಳ ಆರ್ಥಿಕ ಸಹಕಾರದಿಂದ ಸಾಮಾಜಿಕ ಸಮಸ್ಯೆಗಳು ಹಾಗೂ ಬಡತನವನ್ನು ನಿವಾರಣೆ ಮಾಡಲು, ಪರಿಸರ ಸಂರಕ್ಷಣೆ ಮಾಡಲು ಸರ್ಕಾರೇತರ ಸಂಸ್ಥೆಗಳು ಸಕ್ರಿಯವಾಗಿ ಪಾಲ್ಗೊಳ್ಳುವಿಕೆಯಲ್ಲಿ ತೊಡಗಿದವು. ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಇಲಾಖೆ ವತಿಯಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಸಮುದಾಯ ಅಭಿವೃದ್ಧಿ ಯೋಜನೆಗಳನ್ನು ಜಾರಿಗೆ ತಂದು ಆರ್ಥಿಕ ಅಭಿವೃದ್ಧಿಯಾಗುವ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಹಲವು ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳನ್ನು ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಿಗೆ ವಹಿಸಲಾಗಿತ್ತು.

ಗ್ರಾಮೀಣ ಸಮುದಾಯದ ಅಭಿವೃದ್ಧಿ ಹಾಗೂ ಕ್ಷೇಮಾಭಿವೃದ್ಧಿ, ಪರಿಸರ ಸಂರಕ್ಷಣಾ ಯೋಜನೆಗಳನ್ನು ಗ್ರಾಮಾಂತರ ಭಾಗದಲ್ಲಿ ಕಾರ್ಯರೂಪಕ್ಕೆ ಜಾರಿಗೆ ತರಲು ಸಹಕಾರವನ್ನು ನೀಡುವಂತೆ ಸರ್ಕಾರೇತರ ಸಂಸ್ಥೆಗಳು ಕೋರಿಕೊಳ್ಳಲಾಯಿತು. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಸಂಪನ್ಮೂಲಗಳ ಸಹಕಾರ ನೀಡುವ ಸಂಘ ಸಂಸ್ಥೆಗಳು ಆಸಕ್ತಿ ತೋರಿದವು, ನಂತರ ಕಾಲಘಟ್ಟದಲ್ಲಿ ದಕ್ಷಿಣ ಭಾರತ ಹಾಗೂ ಹೆಚ್ಚಿನ ಆದಿವಾಸಿ ಜನಾಂಗ ಸಮುದಾಯಗಳು ಇರುವಂತಹ ಕೇಂದ್ರ ಮತ್ತು ಪೂರ್ವ ಭಾರತದಲ್ಲಿ ಕಲ್ಯಾಣ ಕಾರ್ಯಯೋಜನೆಗಳು ಅದರಲ್ಲಿ ಶಿಕ್ಷಣ, ಆರೋಗ್ಯ, ಪರಿಸರ ವಿವಿಧ ಕ್ಷೇತ್ರಗಳಲ್ಲಿ ಪ್ರಾಮುಖ್ಯತೆ ಇರುವಂತಹ ಕಾರ್ಯಕ್ರಮಗಳನ್ನು ಜಾರಿಗೆ ತರುವಂತೆ ಕ್ರಿಷಿಯನ್ ಮಿಷನರಿಗಳಿಗೆ ಧನಸಹಾಯ ನೀಡುವ ಸಂಸ್ಥೆಗಳು ಆರ್ಥಿಕ ಸಹಾಯವನ್ನು ಕೊಡುವುದರ ಮೂಲಕ ಸ್ಪಂದಿಸಿ ಸಹಕರಿಸಿದವು.

ಸ್ವಾತಂತ್ರ್ಯ ನಂತರ ಕಾಲಘಟ್ಟದಲ್ಲಿ ಸರ್ಕಾರೇತರ ಸಂಸ್ಥೆಗಳ ಸಂಖ್ಯೆಯಲ್ಲಿನ ಬೆಳವಣಿಗೆಗಳನ್ನು ದಾಖಲಿಸಿದವು, ಸರ್ಕಾರಗಳು, ಸರ್ಕಾರೇತರ ಸಂಸ್ಥೆಗಳು ಮಾಡುವ ಸಮಾಜಮುಖಿ ಕಾರ್ಯಕ್ರಮಗಳನ್ನು, ಸೇವೆಯನ್ನು ಪರಿಗಣನೆಗೆ ತೆಗೆದುಕೊಂಡಿದ್ದವು ಮತ್ತು ಅವುಗಳ ಕಾರ್ಯ ಚಟುವಟಿಕೆಗಳನ್ನು ಪ್ರೋತ್ಸಾಹಿಸಿದರು. ಸಾಮಾಜಿಕ ಕಲ್ಯಾಣ ಮಂಡಳಿ (ಸಿ.ಎಸ್.ಡಬ್ಲ್ಯೂ.ಬಿ.) ಸಾಮಾಜಿಕ ಕಲ್ಯಾಣ ಮಂಡಳಿ ಸಮಾಜ ಕಲ್ಯಾಣದ ಮುಖ್ಯ ಗುರಿಗಳನ್ನು ಪೂರೈಸುವ ಸರ್ಕಾರೇತರ ಸಂಸ್ಥೆಗಳಿಗೆ ಆರ್ಥಿಕ ಸಹಾಯವನ್ನು ಒದಗಿಸಿದವು. ಅವುಗಳ ಅಭಿವೃದ್ಧಿಗೆ ಬಲಪಡಿಸಲು ಪ್ರೋತ್ಸಾಹಿಸುವುದು. ಹೊಸ ಸರ್ಕಾರಗಳು ಅನುದಾನಗಳ ಸಹಾಯವನ್ನು ಸಹ ಕೊಟ್ಟಿದ್ದು, ಇದರ ಪ್ರಭಾವದಿಂದ 1950 ರ ಕಾಲಘಟ್ಟದಲ್ಲಿ ಸರ್ಕಾರೇತರ ಸಂಸ್ಥೆಗಳು ಸಂಖ್ಯೆ ಹೆಚ್ಚಾದವು. ಈ ಸಂಸ್ಥೆಗಳು ಸಮಾಜದಲ್ಲಿ ಹೆಚ್ಚಾಗುತ್ತಿರುವ ಬಡತನ, ಅಸಮಾನತೆ, ಆರ್ಥಿಕ ಸಂಕಷ್ಟ, ಪರಿಸರ ವಿನಾಶ, ಅನಾರೋಗ್ಯ, ಶೈಕ್ಷಣಿಕ ಅಭಿವೃದ್ಧಿ ಕೊರತೆ ಅನೇಕ ಸಮಸ್ಯೆಗಳನ್ನು ಬಗೆಹರಿಸುವ ಬಗ್ಗೆ ಸಕ್ರಿಯವಾದವು.

**ಅಧ್ಯಯನದ ಉದ್ದೇಶಗಳು**

- ಪರಿಸರ ಸಂರಕ್ಷಣೆಯಲ್ಲಿ ಸರ್ಕಾರೇತರ ಸಂಸ್ಥೆಗಳ ಕುರಿತು ಅಧ್ಯಯನ ಮಾಡುವುದು.
- ಪರಿಸರ ಅಭಿವೃದ್ಧಿ, ರಕ್ಷಣೆ ಹಾಗೂ ನಗರೀಕರಣದ ಹಿನ್ನಲೆಯಲ್ಲಿ ಸರ್ಕಾರೇತರ ಸಂಸ್ಥೆಗಳ ಕುರಿತು ವಿಶ್ಲೇಷಣೆ ಮಾಡುವುದು.
- ಪರಿಸರ ಜಾಗೃತಿ, ಪರಿಸರ ಮಾಲಿನ್ಯ ತಡೆಗಟ್ಟುವಲ್ಲಿ ಆದಮ್ಯ ಚೇತನ ಸಂಸ್ಥೆಯ ಬಗ್ಗೆ ತಿಳಿಯುವುದು.

**ಅಧ್ಯಯನ ವಿಧಾನ**

ಪ್ರಸ್ತುತ ಸಂಶೋಧನೆಯನ್ನು ಪ್ರಥಮ ಮತ್ತು ದ್ವಿತೀಯ ಮೂಲಗಳಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಪ್ರಾಥಮಿಕ ಮೂಲದಲ್ಲಿ ಕ್ಷೇತ್ರಕಾರ್ಯ ಹಾಗೂ ಸಂದರ್ಶನದ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ದ್ವಿತಿಯ ಆಧಾರದ ಮೂಲಗಳಲ್ಲಿ ಪರಿಸರ ಸಂರಕ್ಷಣೆಯಲ್ಲಿ ಸರ್ಕಾರೇತರ ಸಂಸ್ಥೆಗಳ ಪುಸ್ತಕಗಳು, ಜರ್ನಲ್ಸ್‌ಗಳು, ದಿನಪತ್ರಿಕೆಗಳ ಮಾಹಿತಿ ಹಾಗೂ ಸರ್ಕಾರೇತರ ಸಂಸ್ಥೆಗಳ ಅಧಿಕೃತ ವೆಬ್‌ಸೈಬ್ ಮೂಲಕ ಮಾಹಿತಿಯನ್ನು ಸಂಗ್ರಹಿಸಿ ವಿಶ್ಲೇಷಣೆ ಮಾಡಲಾಗಿದೆ.

**ಆದಮ್ಯ ಚೇತನ**

'ಆದಮ್ಯ ಚೇತನ' ಎಂಬ ಸರ್ಕಾರೇತರ ಸಂಸ್ಥೆಯು ಸಾಮಾಜ ಅಭಿವೃದ್ಧಿ, ಪರಿಸರ ಸಂರಕ್ಷಣೆ ವಿವಿಧ ಕ್ಷೇತ್ರಗಳು ಒಳಗೊಂಡ ಸಾಮೂಹಿಕ ಕೆಲಸ ಕಾರ್ಯಗಳಲ್ಲಿ ಸಕ್ರಿಯವಾಗಿರುವಂತ ಒಂದು ಸಂಸ್ಥೆಯಾಗಿದೆ. ಕೇಂದ್ರ

ಸಚಿವರಾಗಿದ್ದಂತಹ ದಿವಂಗತ ಶ್ರೀ ಅನಂತಕುಮಾರ್, ಮಾಜಿ ಲೋಕಸಭಾ ಸದಸ್ಯರು, ಬೆಂಗಳೂರು ದಕ್ಷಿಣ ಕ್ಷೇತ್ರ, ಇವರು ತನ್ನ ತಾಯಿಯಾದಂತಹ ಶ್ರೀಮತಿ ಗಿರಿಜಾ ಶಾಸ್ತ್ರೀಯವರ ಸವಿ ನೆನಪಿಗೋಸ್ಕರ, 1998ನೇ ಇಸವಿಯಲ್ಲಿ ಈ ಒಂದು ಸಂಸ್ಥೆಯನ್ನು ಸ್ಥಾಪಿಸಿದರು. ಆರಂಭದ ದಿನಗಳಲ್ಲಿ ಬಡವರು, ಹಿಂದುಳಿದವರು, ಮಹಿಳೆಯರಿಗೆ ಉಚಿತ ಟೈಲರಿಂಗ್ ತರಬೇತಿ, ಗಣಕಯಂತ್ರಣ ತರಬೇತಿ, ರಕ್ತದಾನ ಶಿಬಿರ, ಕೆಲಸ ಕಾರ್ಯಗಳನ್ನು ಆರಂಭಿಸಿತು. ಸಮಾಜದ ಜನಸೇವೆಯಲ್ಲಿ ತೊಡಗಿಕೊಂಡಿದ್ದರು.[2]

ಪ್ರಸ್ತುತ ದಿನಗಳಲ್ಲಿ ಅಕ್ಷರ ದಾಸೋಹ ಮತ್ತು ಪರಿಸರ ಸಂರಕ್ಷಣೆ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಈ ಸಂಸ್ಥೆಯು ಸಕ್ರಿಯವಾಗಿದೆ. ದಿವಂಗತ ಅನಂತ್ ಕುಮಾರ್ ರವರ ಧರ್ಮಪತ್ನಿಯಾದ ತೇಜಸ್ವಿನಿ ಅನಂತ್ ಕುಮಾರ್ ರವರು ಬೆಂಗಳೂರಿನ ನಗರದಲ್ಲಿ ಅಸಮತೋಲನ ಪರಿಸರ ಇದ್ದು ಉತ್ತಮ ರೀತಿಯ ಆಮ್ಲಜನಕದ ಕೊರತೆಯಿದೆ, ಪ್ರಜೆಗಳು ನಾನಾ ರೋಗಗಳಿಗೆ ಬಲಿಯಾಗಿ ನರಳುತ್ತಿದ್ದಾರೆ. ಭೂಮಿಯಲ್ಲಿ ಅಂತರ್ಜಲ ಮಟ್ಟ ಕಡಿಮೆ ಆಗುತ್ತಿದೆ, ಮಾನವನ ಜೀವಿತಾವಧಿ ಕಡಿಮೆ ಆಗುತ್ತಿದ್ದು, ನೀರಿನ ಸಮಸ್ಯೆಯನ್ನು ಮುಂದಿನ ತಲೆಮಾರುಗಳ ಎದುರಿಸಬೇಕಾಗುತ್ತದೆ ಎಂಬುದನ್ನು ಅರಿತು, ಪರಿಸರವನ್ನು ಸಮತೋಲನಕ್ಕೆ ತರುವ ಉದ್ದೇಶದಿಂದ ಹಾಗೂ ಭವಿಷ್ಯದಲ್ಲಿ ಪ್ರತಿಯೊಬ್ಬ ನಾಗರೀಕನಿಗೆ ಒಂದು ಮರ ಇರುವಂತೆ ಜಾಗೃತರಾಗಬೇಕಾದರೆ ಸುಮಾರು ಒಂದು ಕೋಟಿ ಸಸಿಗಳನ್ನು ನೆಟ್ಟು ಪೋಷಿಸುವ 'ಹಸಿರು ಭಾನುವಾರ' ಎಂಬ ಕಾರ್ಯ ಕ್ರಮವನ್ನು 2016 ನೇ ಇಸವಿಯಲ್ಲಿ ಚಾಲನೆ ಕೊಟ್ಟರು. ಅ ಅಂದಿನಿಂದ ಹಿಡಿದು ಇವತ್ತಿನವರೆಗೂ ಸುಮಾರು ಲಕ್ಷಾಂತರ ಸಸಿಗಳನ್ನು ನೆಡಲಾಗಿದೆ. 1 ಜೂನ್ 2025ರ ವತ್ತಿಗೆ ಸುಮಾರು 492 ಹಸಿರು ಭಾನುವಾರ ಕಾರ್ಯಕ್ರಮಗಳನ್ನು ನಡೆಸಲಾಗಿದೆ.[3]

ಈ ಕಾರ್ಯಕ್ರಮದ ಮುಖ್ಯ ಉದ್ದೇಶ ಹೆಚ್ಚಾಗುತ್ತಿರುವ ನಗರೀಕರಣ ಹಾಗೂ ತಗ್ಗುತ್ತಿರುವ ಹಸಿರು ಹೊದಿಕೆ, ಪರಿಸರ ಮಾಲಿನ್ಯ ಮತ್ತು ಹವಾಮಾನ ಬದಲಾವಣೆ ಈ ಕಾರಣದಿಂದ ಪರಿಸರವನ್ನು ಸಮತೋಲನಕ್ಕೆ ತರುವ ಉದ್ದೇಶದಿಂದ ಹಸಿರು ಭಾನುವಾರ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ. ಈ ಕಾರ್ಯಕ್ರಮದ ಪ್ರಭಾವದಿಂದ ಹಲವು ಸರ್ಕಾರೇತರ ಸಂಸ್ಥೆಗಳು, ಯುವ ಸಮುದಾಯ ಗುಂಪುಗಳು, ಕ್ಲಬ್ ಗಳು, ಸ್ವಯಂ ಸೇವಾ ಸಂಸ್ಥೆಗಳು, ಸಸಿಗಳನ್ನು ನೆಟ್ಟು ಪೋಷಿಸುವ ಕಾರ್ಯಕ್ರಮಗಳಲ್ಲಿ ಸೇರಿಕೊಂಡಿವೆ. ಪ್ರತಿ ಹಸಿರು ಭಾನುವಾರ ಕಾರ್ಯಕ್ರಮದಲ್ಲಿ ತೇಜಸ್ವಿನಿ ಅನಂತ್ ಕುಮಾರ್ ರವರು ಭಾಗವಹಿಸಿ, ಸಸ್ಯ ನೆಡುವ ಕಾರ್ಯಕ್ರಮಕ್ಕೆ ಚಾಲನೆ ಕೊಡುತ್ತಾರೆ. ಅದಮ್ಯ ಚೇತನ ಸಂಸ್ಥೆಯು ಈ ಸಸ್ಯಗಳನ್ನು ಬೆಳೆಸಿ ಪೋಷಣೆ ಮಾಡುತ್ತದೆ. ಸಸ್ಯಾಗ್ರಹ ಎಂಬ ಕಾರ್ಯಕ್ರಮ ಹಮ್ಮಿಕೊಂಡು ನಿತ್ಯ ಬದುಕಿನಲ್ಲಿ ಹಸಿರು ಜೀವನ ಶೈಲಿಯನ್ನು ಅಳವಡಿಸಿಕೊಳ್ಳುವ ಗುರಿಯಿಂದ ಶ್ರೀ ಅನಂತಕುಮಾರ್ ರವರು 2015ರಲ್ಲಿ ಚಾಲನೆ ನೀಡಿದ್ದರು.

ಸಸ್ಯಾಗ್ರಹ ಚಳುವಳಿ, ಮನೆಗಳು, ಶಾಲೆಗಳು, ಕಾಲೇಜುಗಳು, ಕಛೇರಿಗಳಿಗೆ ಭೇಟಿ ನೀಡಿ ಅರಿವು ಮೂಡಿಸುವ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ನಡೆಸಿಕೊಂಡು ಬರಲಾಗುತ್ತಿದೆ. ಸಸಿಗಳನ್ನು ನೆಡುವುದರೊಂದಿಗೆ ಸಾರ್ವಜನಿಕರಲ್ಲಿ ಪರಿಸರ ಸಂರಕ್ಷಣೆಯ ಕುರಿತು ಅರಿವು ಮೂಡಿಸಲಾಗುತ್ತಿದೆ. ಕಾಂಪೋಸ್ಟ್ ಗೊಬ್ಬರಗಳ ತಯಾರಿಕೆಯ ಕುರಿತು ಅರಿವು, ಪ್ಲಾಸ್ಟಿಕ್ ಬಳಕೆಯ ನಿಷೇಧದ ಕುರಿತು ಅರಿವು ಮೂಡಿಸಿ ಪ್ಲಾಸ್ಟಿಕ್ ಬಳಸದಂತೆ ತಿಳುವಳಿಕೆ ಕೊಡಲಾಗುತ್ತಿದೆ. ಈ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಪ್ರಾದೇಶಿಕ ಸ್ಥಳಗಳಲ್ಲಿನ ಶಾಲಾ–ಕಾಲೇಜು ವಿದ್ಯಾರ್ಥಿಗಳು, ಸ್ಥಳೀಯ ಮುಖಂಡರಗಳು, ಸಾರ್ವಜನಿಕರು ಭಾಗವಹಿಸುವಂತೆ ಮಾಡಿ ಪರಿಸರ ಸಂರಕ್ಷಣೆಯ ಬಗ್ಗೆ

---

[2] Adamya Chethana Foundation https://adamyachethana.org

[3] ಸಂದರ್ಶನ : ಬಿ.ಜಿ.ಭಟ್, ಅದಮ್ಯ ಚೇತನ ಸಂಸ್ಥೆಯ ಹಿರಿಯ ಸದಸ್ಯರು, ಬೆಂಗಳೂರು, ದಿನಾಂಕ : 08–10–2024

ತಿಳಿಸುತ್ತಿದ್ದಾರೆ. ಎನ್.ಎಸ್.ಎಸ್ ಶಿಬಿರ ಮತ್ತು ಎನ್.ಸಿ.ಸಿ ಶಿಬಿರಗಳಲ್ಲಿ ಭಾಗವಹಿಸಿ ವಿದ್ಯಾರ್ಥಿಗಳಲ್ಲಿ ಪರಿಸರ ಸಂರಕ್ಷಣೆ, ಸುಸ್ಥಿರ ಪರಿಸರ, ಪರಿಸರ ಜಾಗೃತಿ ಮೂಡಿಸುತ್ತಿದ್ದಾರೆ. ಈ ರೀತಿಯಾಗಿ ಆದಮ್ಯ ಚೇತನ ಎಂಬ ಸರ್ಕಾರೇತರ ಸಂಸ್ಥೆಯು ಬೆಂಗಳೂರಿನಲ್ಲಿ ಕೇಂದ್ರ ಕಛೇರಿ ಇದ್ದು, ಪರಿಸರವನ್ನು ಪುನರ್ ಸ್ಥಾಪಿಸುವ ಅನೇಕ ಕಾರ್ಯ ಚಟುವಟಿಕೆಗಳನ್ನು ಆಯೋಜನೆ ಮಾಡುತ್ತಿದ್ದಾರೆ. ಸ್ಥಳೀಯ ನಿವಾಸಿಗಳು ಸಹಕಾರವನ್ನು ಪಡೆಯುತ್ತಿದ್ದಾರೆ ಎಲ್ಲದಕ್ಕಿಂತ ಪ್ರಮುಖವಾಗಿ ಯುವ ಸಮುದಾಯಗಳಲ್ಲಿ ಪರಿಸರದ ಬಗ್ಗೆ ಪ್ರೀತಿ, ಪರಿಸರ ಸಂರಕ್ಷಣೆ, ಜಾಗೃತಿ ಕಾರ್ಯಕ್ರಮಗಳ ಮೂಲಕ ಎಚ್ಚರಗೊಳಿಸುತ್ತಿದ್ದಾರೆ.

ಆದಮ್ಯ ಚೇತನ ಸಂಸ್ಥೆಯು "ಸ್ಟೀಲ್ ಪ್ಲೇಟ್ ಮತ್ತು ಸ್ಪೂನ್" ಕಾರ್ಯಕ್ರಮವನ್ನು ಸಾರ್ವಜನಿಕರಿಗೆ ವಿವಿಧ ಶುಭ ಸಮಾರಂಭಗಳಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ತಗ್ಗಿಸಲು ಅವರಿಗೆ ಸ್ಟೀಲ್ ಪ್ಲೇಟ್ ಗಳನ್ನು ಉಚಿತವಾಗಿ ನೀಡಲು ಈ ಸಂಸ್ಥೆಯು ಹಲವು ಕಡೆ 'ಪ್ಲೇಟ್ ಬ್ಯಾಂಕ್' ಅನ್ನು ಮಾಡಿದೆ. ಸಾರ್ವಜನಿಕರು ಇದನ್ನು ಸದುಪಯೋಗ ಮಾಡಿಕೊಳ್ಳಲು ಕೆಲವು ಶರತ್ತುಗಳೊಂದಿಗೆ ಸಂಸ್ಥೆಯು ನೀಡುತ್ತಿದೆ. ಪ್ರತಿನಿತ್ಯ ಹಾಲಿನ ಪ್ಯಾಕೆಟ್‌ಗಳ ಕೊನೆಯ ಭಾಗ ಪೂರ್ತಿ ಕತ್ತರಿಸುವುದರಿಂದ ಆ ಚೂರು ಮರುಬಳಕೆಗೆ ಕಷ್ಟವಾದ್ದರಿಂದ ಸಾರ್ವಜನಿಕರಿಗೆ ಹಾಲಿನ ಪ್ಯಾಕೆಟ್ ಕಟ್ ಮಾಡಿದ ಕೊನೆಯ ಬಾಗ ಪಾಕೆಟ್‌ನಲ್ಲಿಯೇ ಉಳಿಸಿದರೆ ಮರುಬಳಕೆಗೆ ಸಾಧ್ಯವಾಗುತ್ತದೆ ಎಂದು ಸಾರ್ವಜನಿಕರಿಗೆ ಅರಿವು ಮೂಡಿಸುವ ಕೆಲಸ ಮಾಡುತ್ತಿದೆ. ಮರುಬಳಕೆಯ ಚೀಲದ ಬಗ್ಗೆ ಅರಿವು ಈ ಸಂಸ್ಥೆಯು ನಿತ್ಯ ಆಹಾರ ಉತ್ಪಾದನೆ ಮತ್ತು ಸರಬರಾಜಿನಲ್ಲಿ ಅಡುಗೆ ಮನೆಯಲ್ಲಿ ಉತ್ಪಾದನೆಯಾದ ಗಂಜಿ ಹಾಗೂ ಅಕ್ಕಿ ತೊಳೆದ ನೀರನ್ನು ಲಾಲ್ ಬಾಗ್ ಉದ್ಯಾನವನದ ಗಿಡಗಳಿಗೆ ಬಿಡಲಾಗುತ್ತಿದೆ ಹೀಗೆ ಅನೇಕ ಕಾರ್ಯಕ್ರಮಗಳನ್ನು ಆದಮ್ಯ ಚೇತನ ಸಂಸ್ಥೆಯು ಮಾಡಿಕೊಂಡು ಸಾರ್ವಜನಿಕರಲ್ಲಿ ಪರಿಸರದ ಜಾಗೃತಿಯನ್ನು ಮೂಡಿಸುತ್ತಾ ಸಕ್ರಿಯವಾಗಿದೆ.[4]

**ಪರಾಮರ್ಶನ ಗ್ರಂಥಗಳು**


- ಗೋಪಾಲ, ಟಿ. ಎಸ್. (2019). *ಭವಿಷ್ಯದ ಭರವಸೆ ಹಸಿರು ಇಂಧನ.* ನವಕರ್ನಾಟಕ ಪಬ್ಲಿಕೇಶನ್ಸ್.
- ಗುರುಪಾದ ಮರಿಗುದ್ದಿ., ಶ್ರೀಧರ ನಾಯಕ. (2010). *ಅನುಭವ ಕಥನ ಮತ್ತು ಪರಿಸರ ಅಧ್ಯಯನ.* ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ.
- ಗುರುರಾಜ್, ಎಸ್. ದಾವಣಗೆರೆ. (2022, ಮಾರ್ಚ್). *ನೆಲಗುಣ ನಾಗೇಶ ಹೆಗಡೆ ಅಭಿನಂದನಾ ಗ್ರಂಥ.* ನಾಗೇಶ ಹೆಗಡೆ ಅಭಿನಂದನಾ ಸಮಿತಿ, ಭೂಮಿ ಬುಕ್ಸ್.
- ಹರಿಹರ ಶ್ರೀನಿವಾಸರಾವ್. (2023). *ಕರ್ನಾಟಕ ಜಲ ವಿಜ್ಞಾನ ತಂತ್ರಜ್ಞಾನ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಜ್ಯೋತ್ಸ್ನ ಕೃಷ್ಣಾನಂದ ಕಾಮತ್. *ಪರಿಸರ ಪರ್ಯಟನೆ,* ಭಾರತಿಪ್ರಕಾಶನ.


---

[4] ಸಂದರ್ಶನ : ಬಿ.ಜಿ.ಭಟ್, ಅದಮ್ಯ ಚೇತನ ಸಂಸ್ಥೆಯ ಹಿರಿಯ ಸದಸ್ಯರು, ಬೆಂಗಳೂರು, ದಿನಾಂಕ : 08–10–2024